ಓಎಸ್ ನಂಬರ್: 117/2015 2 ಡಿ ಡಬ್ಲ್ಯು: 2

**ದಿ:21.10.2022 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ:** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

1. ಬಾರಿಕೆ ಅಯ್ಯಣ್ಣರವರು ನನಗೆ ಗೊತ್ತು. ನಿಡಿ 10 ಸದರಿ ಬಾರಿಕೆ ಅಯ್ಯಣ್ಣರವರು ಮಾಡಿರುವಂತಹ ನೊಂದಾಯಿತ ವೀಲುನಾಮೆಯಾಗಿರುತ್ತದೆ. ನಿಡಿ 10

ರ ಎಲ್ಲಾ ಪುಟಗಳಲ್ಲಿ ಇರುವ ಬಾರಿಕೆ ಅಯ್ಯಣ್ಣರವರ ಸಹಿಯನ್ನು ಸಾಕ್ಷಿ ನೋಡಿ, ಒಪ್ಪಿದ ಮೇರೆಗೆ ನಿಡಿ 10(ಎ) ಯಿಂದ 10(ಸಿ) ಎಂದು ಗುರುತಿಸಲಾಯಿತು. ನಿಡಿ 10 ವೀಲುನಾಮೆಯನ್ನು ವಕೀಲರಾದಂತಹ ನಿರಂಜನ್ ಎಂಬುವವರು ತಯಾರಿಸಿರುತ್ತಾರೆ. ಸದರಿಯವರು ಕೂಡ ನಿಡಿ 10 ಕ್ಕೆ ಸಹಿ ಮಾಡಿರುತ್ತಾರೆ. ನಿಡಿ 10 ವೀಲುನಾಮೆಗೆ ನಾನು ಕೂಡ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ನಿಡಿ 10 ರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ತನ್ನ ಸಹಿ ಎಂದು ಒಪ್ಪಿದ ಮೇರೆಗೆ ನಿಡಿ 10(ಡಿ) ಎಂದು ಗುರುತಿಸಲಾಯಿತು. ಈರಪ್ಪ ಎಂಬುವವರು ಕೂಡ ನಿಡಿ 10 ವೀಲುನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

2. ನಿಡಿ 10 ನೊಂದಾವಣಿಯಾಗುವ ಸಮಯದಲ್ಲಿ ಬಾರಿಕೆ ಅಯ್ಯಣ್ಣರವರು ಸಹಿ ಮಾಡಿದ್ದು, ಸದರಿಯವರ ಸಹಿಯನ್ನು ನಿಡಿ 10(ಇ) ಮತ್ತು 10(ಎಫ್) ಎಂದು ಗುರುತಿಸಲಾಯಿತು. ನಿಡಿ 10 ವೀಲುನಾಮೆ ನೊಂದಾವಣಿಯಾಗುವ ಸಮಯದಲ್ಲಿ ನಾನು ಕೂಡ ಸಹಿ ಮಾಡಿರುತ್ತೇನೆ ಸಾಕ್ಷಿಯ ಸಹಿಯನ್ನು ನಿಡಿ 1 (ಜಿ) ಎಂದು ಗುರುತಿಸಲಾಯಿತು. ಅದೇ ರೀತಿ ನಿಡಿ 10. ನೊಂದಾವಣಿಯಾಗುವ ಸಮಯದಲ್ಲಿ ಸಿ ಡಿ ಈರಪ್ಪರವರು ಕೂಡ ಸಹಿ ಮಾಡಿರುತ್ತಾರೆ.

**ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.